


## ಸಯ್ಯದ್ ಯೇಜಸ್ ಪಾಷ

ಕಲೆ: ಬಾದಲ್ ನಂಜುಂಡಸ್ವಾಮಿ

# ಗಾರೆ ಕಲ್ಲು


ಸುಣ್ಣವ ಬೆರೆಸಿದ ಕಲ್ಲಿನ ದೇಹ ಮಾಯೆಯಾಗಿ ಛಾಯೆಯಾಗಿ
ಮನಸ್ಸಿನ ಮಾತುಗಳು ಮರುಳಾಗಿ ಉರುಳಾಗಿ
ಎರಡು ಬೆರೆಸಿ ಅರೆದರು ಗಾರೆಕಲ್ಲಿಗೆ ಆಗಲಿಲ್ಲ ತಿರುಳು



ನೀರ ಕುಡಿವ ದೇಹದ ಗೋಡೆ ಜಂಗಮವಾಗದೆ ಸ್ಥಾವರವಾಗಿ
ಹರೆಯದ ನೀರ ಚಿಮುಕಿಸಿ
ಬುದ್ಧಿಯ ಚಕಮಕಿ ಕಲ್ಲ ತೀಡಿ
ಸೃಷ್ಟಿಯ ರಹಸ್ಯ ಭೇದಿಸಲು
ಬದುಕಿನ ಬಂಡಿ ಸವೆಸುತ್ತಿದೆ.

ಸಿಮೆಂಟು ಕಾಂಕ್ರೀಟು ಜಲ್ಲಿಕಲ್ಲು
ಕಬ್ಬಿಣದ ತಂತಿ ಸುತ್ತಿ ಸುತ್ತಿ ಕಟ್ಟಿದ ಮನೆಗಳು ಖಾಲಿ ಖಾಲಿ
ಮನಸ್ಸು ಮಾಯೆಯ ಮರ್ಕಟ ಬದುಕು ಬಂಡಿಯ ಉಯ್ಯಾಲೆ
ಗಟ್ಟಿ ಇಲ್ಲದ ಬುವಿಯ ಪಾಯ

ಸದ್ಗುಣಗಳ ತೀರ ದೂರ
ಬುದ್ಧನ ನುಡಿಯ ಸತ್ಯದ ತತ್ವ
ಬದುಕು ಕಟ್ಟಲು ಹೆಣಗಾಟ
ಸೂಫಿ, ದಾಸರ, ಶರಣರ
ಅನುಭವ ನೀಡುವ ಪದಗಳು
ಅರಣ್ಯವೇ ಬೆಳದಿಂಗಳಂತೆ



ಸುಣ್ಣದ ಸತ್ವ ಅರಿಯದ ಜನ
ಬೆಂದ ಮೇಲೆಯೇ ಬದುಕು
ಗಟ್ಟಿ ಗಾರೆ ಕಾಣದ ದೇಹಕ್ಕೆ
ಮಾಯೆಯ ಮರಳು ತಂದರೆ
ಶತಮಾನಗಳು ಕಂಡು
ದೇಹ ಸೀಳಿರುವ ಗಾರೆ ಶಿಲೆ
ನಗುವಿನಿಂದ ನುಡಿದಿದೆ
ಜನ ಮರುಳೋ
ಜಾತ್ರೆ ಮರುಳೋ